**All India Radio: Bangalore**
**National Bulletin In Kannada**
**12.05.2025 / 7.35 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**12.05.2025 / 7.35 pm**

**<><*<><>*><>**

ಮುಖ್ಯಾಂಶಗಳು

1. ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಂದ ಇಂದು ರಾತ್ರಿ ೮ ಗಂಟೆಗೆ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ
2. ಇಂದು ಸಂಜೆ ನಡೆದ ಭಾರತ - ಪಾಕಿಸ್ತಾನ ಸೈನಿಕ ಕಾರ್ಯಚರಣೆ ಮಹಾನಿರ್ದೇಶಕರ ಮಟ್ಟದ ಮಾತುಕತೆ
3. ರಕ್ಷಣಾ ಪಡೆಯ ಮೂರು ಸೇವಾ ವಿಭಾಗಗಳ ಸಮನ್ವಯದಲ್ಲಿ ಆಪರೇಷನ್ ಸಿಂಧೂರ್ ಸೈನಿಕ ಕಾರ್ಯಚರಣೆ
4. ದೇಶದಲ್ಲಿ ಕೃತಕ ಆಹಾರ ಧಾನ್ಯ ಅಭಾವ ಸೃಷ್ಟಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಗಳಿಗೆ ಸೂಚನೆ
5. ತಾಂತ್ರಿಕ ಕ್ರಮಗಳಿಂದ ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ಗಮನಾರ್ಹ ರೂಪಾಂತರ - ಬಿ.ಎಸ್.ಸಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುಂದರ ರಾಮಮೂರ್ತಿ

*********

ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಇಂದು ರಾತ್ರಿ ೮ ಗಂಟೆಗೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪೆಹಲ್ಗಾಮ್ ನಲ್ಲಿ ೨೫ ಭಾರತೀಯರು ಹಾಗೂ ಓರ್ವ ನೇಪಾಳಿ ನಾಗರಿಕರ ಮೇಲೆ ಉಗ್ರಗಾಮಿಗಳು ನಡೆಸಿದ ದಾಳಿ ಬಳಿಕ ಭಾರತ ನಡೆಸಿದ ಆಪರೇಷನ್ ಸಿಂಧೂರ್ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಭಾಷಣ ಮಾಡಲಿದ್ದಾರೆ. ಭಾರತ ಪ್ರತಿಕಾರಾತ್ಮಕ ಕ್ರಮ ಕೈಗೊಂಡು ನಿಖರವಾಗಿ ಕಾರ್ಯಚರಣೆ ನಡೆಸಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಜಮ್ಮು ಕಾಶ್ಮೀರ ಪ್ರದೇಶದ ಉಗ್ರಗಾಮಿ ನೆಲೆಗಳನ್ನು ನಾಶಪಡಿಸಿದ್ದು ೧೦೦ಕ್ಕೂ ಹೆಚ್ಚು ಉಗ್ರಗಾಮಿಗಳನ್ನು ದಮನಗೊಳಿಸಿದೆ.

*********

ಪ್ರಧಾನ ಮಂತ್ರಿ ನರೇಂದ್ರಮೋದಿ ದೆಹಲಿಯ ತಮ್ಮ ನಿವಾಸದಲ್ಲಿಂದು ಉನ್ನತ ಮಟ್ಟದ ಸಭೆಯನ್ನು ನಡೆಸಿದರು. ರಕ್ಷಣಾ ಸಚಿವ ರಾಜನಾಥ ಸಿಂಗ್, ವಿದೇಶಾಂಗ ಖಾತೆ ಸಚಿವ ಡಾ.ಎಸ್.ಜೈಶಂಕರ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಮೂರೂ ಸಶಸ್ತ್ರ ಪಡೆಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

*******

ಭಾರತ ಹಾಗೂ ಪಾಕಿಸ್ತಾನಗಳ ಸೈನಿಕ ಕಾರ್ಯಚರಣೆಯ ಮಹಾನಿರ್ದೇಶಕರು ಗಳ ಮಟ್ಟದ ಮಾತುಕತೆ ಇಂದು ಸಂಜೆ ನಡೆಯಿತು ಇದಕ್ಕೂ ಮುನ್ನ ಈ ಮಾತುಕತೆ ಅಪರಾಹ್ನ ೧೨ ಗಂಟೆಗೆ ನಿಗಧಿಯಾಗಿತ್ತು.

*******

ಭಾರತದ ಕಾರ್ಯಾಚರಣೆ ಉಗ್ರಗಾಮಿಗಳು ಹಾಗೂ ಅವರನ್ನು ಬೆಂಬಲಿಸುವ ಮೂಲ ಸೌಕರ್ಯಗಳನ್ನು ಗುರಿಯಾಗಿಸಿಕೊಂಡಿತ್ತೆ ವಿನಹಃ ಪಾಕಿಸ್ತಾನ ಸೈನ್ಯದ ವಿರುದ್ಧ ಅಲ್ಲ ಎಂದು ಭಾರತೀಯ ವಾಯು ಕಾರ್ಯಾಚರಣೆ ಮಹಾನಿರ್ದೇಶಕ ಏರ್‌ಮಾರ್ಷಲ್ ಏ.ಕೆ.ಭಾರ್ತಿ ಪುನರುಚ್ಚರಿಸಿದ್ದಾರೆ. ಪಾಕಿಸ್ತಾನದ ಸೈನ್ಯ ಮಧ್ಯ ಪ್ರವೇಶಿಸಿದ್ದು ಹಾಗೂ ಉಗ್ರಗಾಮಿಗಳ ಪರವಾಗಿ ನಿಂತಿದ್ದು ದುಃಖದಾಯಕ ಸಂಗತಿ. ಹೀಗಾಗಿ ಭಾರತದ ಸಶಸ್ತ್ರ ಪಡೆ ಪ್ರತಿಕ್ರಿಯಿಸಲೇಬೇಕಾಯಿತು ಎಂದು ಏರ್‌ಮಾರ್ಷಲ್ ಏ.ಭಾರ್ತಿ ದೆಹಲಿಯಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.ಸಿಂಧೂ ಕಾರ್ಯಾಚರಣೆಯಲ್ಲಿ ನಾಗರೀಕ ಮೂಲ ಹಾಗೂ ಸೈನಿಕ ಮೂಲ ಸೌಕರ್ಯಗಳಿಗೆ ಕನಿಷ್ಠ ಹಾನಿಯಾಗುವಂತೆ ಕೈಗೊಂಡ ನಿಖರ ಕ್ರಮಗಳ ಬಗ್ಗೆ ಅವರು ವಿವರಿಸಿದರು. ಕಾರ್ಯಚರಣೆ ಸಂದರ್ಭದಲ್ಲಿ ಆಕಾಶ್ ವ್ಯವಸ್ಥೆಗಳಂತಹ ದೇಶಿಯ ವಾಯು ರಕ್ಷಣಾ ವ್ಯವಸ್ಥೆ ಪ್ರದರ್ಶಿಸಿದ ಸಾಧನೆಯನ್ನು ಏರ್ ಮಾರ್ಷಲ್ ಭಾರ್ತಿ ಪ್ರಸ್ತಾಪಿಸಿದರು. ರಕ್ಷಣಾ ವಲಯಕ್ಕೆ ಸತತ ನೀತಿ ಬೆಂಬಲ ಹಾಗೂ ಹಣಕಾಸು ಒದಗಣೆಯಿಂದಾಗಿ ಉಪಕರಣ ಹಾಗೂ ಶಸ್ತ್ರಾಸ್ತ್ರ ವ್ಯವಸ್ಥೆ, ಸಾಧನೆಗಳನ್ನು ಖರೀದಿಸಲು ಸಹಾಯವಾಯಿತೆಂದು ಏರ್ ಮಾರ್ಷಲ್ ಭಾರ್ತಿ ತಿಳಿಸಿದರು.

ಧ್ವನಿ : ಏ. ಭಾರ್ತಿ.

ಪಾಕಿಸ್ತಾನ ಹಾರಿಬಿಟ್ಟ ಚೀನಾ ಮೂಲದ ಪಿ.ಎಲ್.೧೫ ಕ್ಷಿಪಣಿ ಗುರಿತಪ್ಪಿದ್ದು, ಇದನ್ನು ಹೊಡೆದುರುಳಿಸಲಾಗಿದೆ ಎಂದು ಏರ್ ಮಾರ್ಷಲ್ ಭಾರ್ತಿ ತಿಳಿಸಿದರು. ಭಾರತ ಪ್ರತಿಯಾಗಿ ನೂರ್‌ಖಾನ್ ಮತ್ತು ರಹೀಂಯಾರ್‌ಖಾನ್ ವಾಯುನೆಲೆಗಳ ಮೇಲೆ ಆಕ್ರಮಣ ನಡೆಸಿತು ಎಂದು ಅವರು ವಿವರಿಸಿದರು.

ಸೈನಿಕ ಕಾರ್ಯಚರಣೆಗಳ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಮಾತನಾಡಿ ವೈರಿ ಡ್ರೋಣ್‌ಗಳು ಯುದ್ಧ ವಿಮಾನ ಹಾಗೂ ಕ್ಷಿಪಣಿ ದಾಳಿಗಳನ್ನು ಭಾರತದ ವಾಯು ರಕ್ಷಣಾ ವ್ಯವಸ್ಥೆಯಿಂದ ಹೇಗೆ ವಿಫಲಗೊಳಿಸಲಾಯಿತು ಎಂಬುದನ್ನು ವಿವರಿಸಿದರು. ಮೇ ೯ ಹಾಗೂ ೧೦ರ ರಾತ್ರಿ ಪಾಕಿಸ್ತಾನ ಪಡೆ ಭಾರತೀಯ ವಾಯುಕ್ಷೇತ್ರವನ್ನು ಗುರಿಯಾಗಿಸಿ ಆಕ್ರಮಣ ಮಾಡಲು ಯತ್ನಿಸಿದಾಗಲೆಲ್ಲ ಹಿಮ್ಮೆಟಿಸಲಾಯಿತು ಎಂದು ಅವರು ಹೇಳಿದರು. ಭಾರತದ ವಾಯು ರಕ್ಷಣಾ ಕ್ಷೇತ್ರದಲ್ಲಿ ಪಾಕಿಸ್ತಾನಕ್ಕೆ ನುಗ್ಗಲು ಅವಕಾಶವನ್ನೇ ನೀಡಲಾಗಲಿಲ್ಲ ಎಂದು ಅವರು ಹೇಳಿದರು. ಧ್ವನಿ : ರಾಜೀವ್ ಘಾಯ್

ರಕ್ಷಣಾ ಪಡೆಯ ಮೂರು ಸೇವಾ ವಿಭಾಗಗಳ ಸಮನ್ವಯದಲ್ಲಿ ಆಪರೇಷನ್ ಸಿಂಧೂರ್ ನಡೆಸಲಾಯಿತೆಂದು ರಾಜೀವ್ ಘಾಯ್ ತಿಳಿಸಿದರು. ಭಾರತೀಯ ನೌಕಾಪಡೆ ಸತತ ಪರಿವೀಕ್ಷಣೆಯ ಮೂಲಕ ಯಾವುದೇ ದಾಳಿ ಬೆದರಿಕೆಯನ್ನು ಯಶಸ್ವಿಯಾಗಿ ತೊಡೆದು ಹಾಕಿತು ಎಂದು ನೌಕಾಕಾರ್ಯಚರಣೆಯ ಮಹಾನಿರ್ದೇಶಕ ವೈಸ್ ಅಡ್ಮಿರಲ್ ತಿಳಿಸಿದ್ದಾರೆ.

ಧ್ವನಿ: ವೈಸ್ ಅಡ್ಮಿರಲ್ ಪ್ರಮೋದ್

*******

ದೇಶದಲ್ಲಿ ಅಕ್ಕಿ ಗೋಧಿ ಸೇರಿದಂತೆ ದವಸ ಧಾನ್ಯಗಳು ಒಂದೂವರೆ ವರ್ಷಕ್ಕೆ ಸಾಕಾಗುವಷ್ಟು ಇದೆ. ಇವುಗಳನ್ನು ಸಂಗ್ರಹಿಸುವ ಮೂಲಕ ಕೃತಕ ಅಭಾವ ಸೃಷ್ಟಿಸಿ ದರ ಏರಿಕೆಗೆ ಕಾರಣರಾಗುವವರ ವಿರುದ್ಧ  ಕಠಿಣ ಕ್ರಮ ತೆಗೆದುಕೊಳ್ಳುವಂತೆ ರಾಜ್ಯಗಳಿಗೆ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.ಹುಬ್ಬಳ್ಳಿಯಲ್ಲಿ ಇಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈಗಾಗಲೇ ಅಧಿಸೂಚನೆ ಕೂಡ ಹೊರಡಿಸಲಾಗಿದೆ. ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಬಹಳ ದೊಡ್ಡ ಪ್ರಮಾಣದಲ್ಲಿ ಆಹಾರ ಸಂಗ್ರಹಣೆ ಇದೆ. ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಸದ್ಯಕ್ಕೆ ಕದನ ವಿರಾಮ ಆಗಿದೆ. ಈಗಾಗಲೇ ಭಾರತ ಭಯೋತ್ಪಾದನೆಯನ್ನು ಯುದ್ಧ ಎಂದು ಪರಿಗಣಿಸಿದ್ದು, ಯಾವುದೇ ಕಾರಣಕ್ಕೂ ಒಂದಾಗಿರಬೇಕೆಂದು ವಿಪಕ್ಷಗಳಿಗೆ ಮನವಿ ಮಾಡುತ್ತಿರುವುದಾಗಿ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

*********

ಭಾರತದ ಬಂಡವಾಳ ಮಾರುಕಟ್ಟೆ ಗಮನಾರ್ಹ ತಾಂತ್ರಿಕ ರೂಪಾಂತರ ಹೊಂದುತ್ತಿದೆ ಎಂದು ಮುಂಬೈ ಶೇರು ವಿನಿಮಯ - ಬಿ.ಎಸ್.ಇ. ನಿಯಮಿತದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಂದರ ರಾಮಮೂರ್ತಿ ಹೇಳಿದ್ದಾರೆ. ಅವರು ದುಬೈ ನ ಮಧಿನಾಕ್ ಜುಮೇರಾ  ದಲ್ಲಿ ಇಂದು ಆರಂಭವಾದ ೩ನೇ ದುಬೈ ಫಿಂಟೆಕ್ ಶೃಂಗಸಭೆ ಉದ್ದೇಶಿಸಿ ಮಾತಾನಾಡುತ್ತಿದ್ದರು. ಮುಂಬೈ ಶೇರು ವಿನಿಮಯ ಕೇಂದ್ರ ಮಾಡಿದ ಸಾಧನೆಯನ್ನು ರಾಮಮೂರ್ತಿ ಅವರು ವಿವರಿಸಿ ಪ್ರಸ್ತುತ ಈ ಕೇಂದ್ರ ನೈಜ ಕಾಲದ ಮೇಲೆ ಕಾರ್ಯ ನಿರ್ವಹಿಸುತ್ತಿದೆ ಎಂದರು.

*********

ದುಬೈನ ಶೇಕ್ ಮಕ್‌ತುಮ್ ಬಿನ್ ಮಹಮ್ಮದ್‌ಬಿನ್ ರಷೀದ್ ಅಲ್ ಮಕ್‌ತಮ್ ಅವರ ಪೋಷಕತ್ವದಲ್ಲಿ ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರ ಆಯೋಜಿಸಿರುವ ಈ ಶೃಂಗಸಭೆಯಲ್ಲಿ ೧೦೦ ದೇಶಗಳ ಒಂದು ಸಾವಿರಕ್ಕೂ ಅಧಿಕ ಬಂಡವಾಳ ಹೂಡಿಕೆದಾರರು ಸೇರಿದಂತೆ ಎಂಟು ಸಾವಿರ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

*********

ಯಾವುದೇ ಅನುಮಾನಾಸ್ಪದ, ಅಪರಿಚಿತ ವಸ್ತುಗಳು ಕಂಡುಬಂದಲ್ಲಿ ನಾಗರೀಕರು ಅದನ್ನು ಮುಟ್ಟಬಾರದು ಎಂದು ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರ ಎನ್.ಡಿ.ಎಂ.ಎ. ಸೂಚನೆ ನೀಡಿದೆ. ಈ ವಸ್ತುಗಳು ಸ್ಫೋಟಕ ವಸ್ತುಗಳಾಗಿರಬಹುದಾದ ಸಂಭವವಿದ್ದು, ಇವುಗಳನ್ನು ಸ್ಪರ್ಶಿಸಿದರೆ ಅಪಾಯ ತಲೆದೋರಬಹುದೆಂದು ಎಚ್ಚರಿಕೆ ನೀಡಿದ್ದಾರೆ. ಇಂತಹ ಸಂಶಯಾಸ್ಪದ ವಸ್ತುಗಳು ಕಂಡು ಬಂದಲ್ಲಿ ಜನರು ತಕ್ಷಣ ಸ್ಥಳೀಯ ಅಧಿಕಾರಿಗಳಿಗೆ ತಿಳಿಸುವಂತೆ ಪ್ರಾಧಿಕಾರ ಸೂಚಿಸಿದೆ.

*********

ಛತ್ತಿಸ್‌ಗಡದ ರಾಯಪುರದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಜೀವ ಹಾನಿಯಾದ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಶೋಕ ವ್ಯಕ್ತ ಪಡಿಸಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ಪ್ರಧಾನ ಮಂತ್ರಿಯವರ ಕಾರ್ಯಲಯ ೨ಲಕ್ಷ ರೂಪಾಯಿ ಪರಿಹಾರ ಪ್ರಕಟಿಸಿದೆ. ಗಾಯಗೊಂಡವರಿಗೆ ತಲಾ ಐವತ್ತು ಸಾವಿರ ರೂಪಾಯಿ ಘೋಷಿಸಲಾಗಿದೆ. ಗಾಯಗೊಂಡವರು ಶೀಘ್ರ ಗುಣಮುಖರಾಗಲೆಮದು ಪ್ರಧಾನಿ ಅವರು ಹಾರೈಸಿದ್ದಾರೆ.

*********

ದೆಹಲಿ ವಿಧಾನಸಭಾ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ೫೦೦ ಕಿಲೋ ವ್ಯಾಟ್ ಸೌರವಿದ್ಯುತ್ ಸ್ಥಾವರಕ್ಕೆ ಲೆಫ್ಟಿನೆಂಟ್ ಗವರ್ನರ್ ವಿನಯ್‌ಕುಮಾರ್ ಸಕ್ಸೇನಾ ಮತ್ತು ರೇಖಾಗುಪ್ತಾ ಇಂದು ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತಾನಾಡಿದ ಲೆಫ್ಟಿನೆಂಟ್ ಗವರ್ನರ್ ಸೌರಸ್ಥಾವರ ಸ್ಥಾಪನೆ , ಪರಿಸರ ಸುಸ್ಥಿರತೆ ಬಗ್ಗೆ ಸರಕಾರಕ್ಕೆ ಇರುವ ಪ್ರಾಮಾಣಿಕ ಬದ್ಧತೆಯನ್ನು ತೋರಿಸುತ್ತದೆ. ದೆಹಲಿ ಸರ್ಕಾರ ಸೌರ ಇಂಧನ ಉಪಕ್ರಮಗಳನ್ನು ಪ್ರೋತ್ಸಾಹಿಸುತ್ತಿದೆ ಎಂದು ಹೇಳಿದರು. ಮುಖ್ಯಮಂತ್ರಿ ರೇಖಾಗುಪ್ತ ಮಾತಾನಾಡಿ ತಮ್ಮ ಸರ್ಕಾರ ಸ್ವಚ್ಛ, ಹಸಿರು ದೆಹಲಿ ಸಂಕಲ್ಪಕ್ಕೆ ಬದ್ಧವಾಗಿದೆ. ಪ್ರಸ್ತುತ ದೆಹಲಿ ಗೆ ೮ ಸಾವಿರ ಮೇಗಾ ವ್ಯಾಟ್ ವಿದ್ಯುಚ್ಛಕ್ತಿ ಅವಶ್ಯಕತೆಯಿದೆ. ಈ ಬೇಡಿಕೆ ಪೂರೈಸುವುದು ಸವಾಲಿನ ಕೆಲಸವಾಗಿದೆ. ಸೌರ ವಿದ್ಯುತ್ ಘಟಕದಿಂದ ವಿದ್ಯುತ್ ಪೂರೈಸಲು ಅನುಕೂಲವಾಗಲಿದೆ ಎಂದು ಹೇಳಿದರು.

******END********